INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -2, March--April, 2025,
PageNo,36- 46
Peer -Reviewed, Refereed Journal

# ಕುವೆಂಪು ಸಾಹಿತ್ಯ: ಸಮಾಜವಾದದ ಕಣ್ಣೋಟದಲ್ಲಿ

ಅವಿನಾಶ್ ಎಚ್ ಇ.[1]

ಭಾರತೀಯ ಮತ್ತು ಆಧುನಿಕ ಕನ್ನಡ ಸಾಹಿತ್ಯದ ಹಲವಾರು ಪ್ರಕಾರಗಳು, ರೂಪಾಂತರಗಳಲ್ಲಿ ಪಾಶ್ಚಿಮಾತ್ಯ ಸಾಹಿತ್ಯಕ ಮತ್ತು ಸಾಮಾಜಿಕ ಪ್ರೇರಣೆ–ಪ್ರಭಾವಗಳಿದ್ದರು ; ಇವುಗಳ ಬೇರು ಪ್ರಾಚೀನ ಭಾರತದಲ್ಲಿಯೇ ಇತ್ತು ಎಂಬುವುದನ್ನು ಗುರುತಿಸಬಹುದು. ಆದರೆ ಸಂಪೂರ್ಣ ಭಾರತೀಯ ಆಧುನಿಕ ಸಾಹಿತ್ಯವು ಪಾಶ್ಚಿಮಾತ್ಯ ಸಾಹಿತ್ಯದ ಹಲವಾರು 'ಇಸಂ' ಗಳಿಂದ ವ್ಯವಸ್ಥಿತವಾಗಿ ಪುನಃ ಸಂರಚಿತವಾಗಿದೆ ಎನ್ನುವುದು ಕೂಡ ಅಷ್ಟೆ ಸತ್ಯ. ವಸಾಹತುಶಾಹಿ ಆಳ್ವಿಕೆ ಭಾರತವನ್ನೂ ಸೇರಿದಂತೆ ಅನೇಕ ವಸಾಹತು ದೇಶಗಳಲ್ಲಿ ತಮ್ಮ ನಿರಂಕುಶ ಪ್ರಭುತ್ವವನ್ನು ಸುಭದ್ರವಾಗಿ ಸ್ಥಾಪಿಸಿಕೊಳ್ಳಲು ಅಥವಾ ಮರು ವ್ಯಾಖ್ಯಾನಿಸಿಕೊಳ್ಳಲು ಹತ್ತು–ಹಲವು ಮಾರ್ಗಗಳನ್ನು ಕಂಡುಕೊಂಡಿತು. ಈ ನಿಟ್ಟಿನಲ್ಲಿ ತಕ್ಕ ಮಟ್ಟಿಗೆ ಯಶಸ್ವಿಯು ಆಯಿತು. ವಸಾಹತು ಪ್ರಭುತ್ವಕ್ಕೆ ಅನೇಕ ಬಗೆಯ ಏಣಿ–ಶ್ರೇಣಿ ವ್ಯವಸ್ಥೆಯಿಂದ ರೂಪುಗೊಂಡಿದ್ದ ಭಾರತೀಯ ಸಮಾಜವನ್ನು ಅರ್ಥ ಮಾಡಿಕೊಳ್ಳುವುದು ಅಷ್ಟೇನು ಸುಲಭದ ಕೆಲಸವಾಗಿರಲಿಲ್ಲ. ಜಾತಿ, ಲಿಂಗ, ವರ್ಗ ಇತ್ಯಾದಿ ಅಸಮಾನತೆಗಳು ಮೂರ್ತಿವೆತ್ತಂತಿದ್ದ ಇಲ್ಲಿನ ವ್ಯವಸ್ಥೆಯನ್ನು ಏಕ ಸೂತ್ರದಲ್ಲಿ ಬೆಸೆಯುವ ಅಥವಾ ಇವುಗಳ ಮೇಲೆ ಪಟ್ಟಭದ್ರ ಹಿಡಿತ ಸಾಧಿಸುವ ಅನೇಕ ಪ್ರಯೋಗಗಳನ್ನು ಪ್ರಭುತ್ವ ಅನೂಚಾನವಾಗಿ ನಡೆಸುತ್ತ ಸಾಗಿತು. ಭಾರತೀಯ ಚರಿತ್ರೆ ನಿರ್ಮಾಣ, ಇಂಗ್ಲಿಷ್ ಶಿಕ್ಷಣ, ಸಾಮುದಾಯಿಕ ಸಂಸ್ಕೃತಿಯ ಪರಿಕಲ್ಪನೆ ಇತ್ಯಾದಿಗಳು ಈ ಬೃಹತ್ ಪ್ರಯೋಗಾಲಯದ ಪ್ರತಿಫಲಗಳಾಗಿದ್ದವೆಂಬುದು ಗಮನಾರ್ಹ. ಇವುಗಳ ಸಹಚರ್ಯದಲ್ಲಿ ಭಾರತಕ್ಕೆ ಅಡ್ಡಾದಿಡ್ಡಿಯಾಗಿ ಪ್ರವೇಶಿಸಿದ 'ಆಧುನೀಕತೆ'ಯು ಈ ಭೂ–ಪ್ರದೇಶದ ಜನಜೀವನದಲ್ಲಿ ಉಂಟುಮಾಡಿದ ಸಂಚಲನವನ್ನು ಹಾಗೂ ಅದರೆಲ್ಲಾ ಆಗುಹೋಗುಗಳನ್ನು ಈ ಹೊತ್ತಿಗೂ ನಾವು ಅರ್ಥೈಸಿಕೊಳ್ಳಲು ಎಡತಾಕುತ್ತಿದ್ದೇವೆ

[1]ಸಂಶೋಧನಾ ವಿದ್ಯಾರ್ಥಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಎಂಬುದು ಸೋಜಿಗ. ವೈಚಾರಿಕತೆ, ಸಮಾಜವಾದ ಇತ್ಯಾದಿ ಪರಿಕಲ್ಪನೆಗಳೂ ಈ ಆಧುನಿಕತೆಯ ಬಳುವಳಿಗಳಾಗಿ ನಮಗೆ ಒದಗಿಬಂದವೆಂಬುದು ಈಗ ಚರಿತ್ರೆ.

ಆಧುನಿಕ ಭಾರತದಲ್ಲಿ ಒಂದು ಸೈದ್ಧಾಂತಿಕ ಶಕ್ತಿಯಾಗಿ ಮತ್ತು ರಾಜಕೀಯ ಚಳವಳಿಯಾಗಿ ಸಮಕಾಲೀನ ಬದುಕನ್ನು ಸಾಕಷ್ಟು ಪ್ರಭಾವಿಸಿದ ಶಕ್ತಿಯೆಂದರೆ ಅದು 'ಸಮಾಜವಾದ'. ಸಮಾಜವಾದದ ಮುಖ್ಯ ಆಶಯ ಸಮ ಸಮಾಜ ನಿರ್ಮಾಣ, ಮಾನವ ಶೋಷಣೆ ಕೊನೆಗಾಣಿಸುವುದು, ಸಮಾಜದ ಪ್ರತಿಯೊಬ್ಬರು ಪ್ರಗತಿ ಹೊಂದಲು ಅವಕಾಶ ಕಲ್ಪಿಸುವುದು. ಸಮಾಜವಾದ ಎಂಬ ಪದವು ಆಂಗ್ಲಭಾಷೆಯ 'SOCIALISM'ನ ಸಂವಾದಿ ಪದ. ಇದು ಸಮಾನತೆಯ ಆಧಾರದ ಮೇಲೆ ರಚಿಸಲಾಗುವ ಸಮಾಜಿಕ ವ್ಯವಸ್ಥೆ. ಬಂಡವಾಶಾಹಿ ಶೋಷಣೆ ಇಲ್ಲದ ಕಮ್ಯುನಿಸ್ಟ್ ವ್ಯವಸ್ಥೆಗೆ ಸಾಗುವ ಸಂಕ್ರಮಣ ವ್ಯವಸ್ಥೆ ಎಂದು ಕೂಡ ಅರ್ಥೈಸಬಹುದು.

ಸಮಾಜವಾದ ಎನ್ನುವ ಪದವನ್ನು ಮೊದಲಿಗೆ 1803ರಲ್ಲಿ ಇಟಾಲಿಯನ್ ಭಾಷೆಯಲ್ಲಿ ಗುರುತಿಸುತ್ತಾರೆ. ಆದರೆ ಅಲ್ಲಿ ಬಳಸಲಾದ ಸಮಾಜವಾದ ಎಂಬ ಪದಕ್ಕೂ ಈಗ ನಾವು ಬಳಸುತ್ತಿರುವ ಸಮಾಜವಾದ ಎಂಬ ಪದಕ್ಕೂ ಅರ್ಥವ್ಯಾಪ್ತಿಯು ಬೇರೇಯೆ ಆಗಿದೆ. 1827ರಲ್ಲಿ ರಾಬರ್ಟ ಓವೆನ್ ಅನುಯಾಯಿಗಳು ಪ್ರಕಟಿಸುತ್ತಿದ್ದ 'ಸಹಕಾರಿ' ಪತ್ರಿಕೆಯಲ್ಲಿ ಓವೆನ್ ವಾದಿಗಳನ್ನು ನಿರ್ದೇಶಿಸಲು 'ಸಮಾಜವಾದಿಗಳು' ಎಂಬ ಪದವನ್ನು ಬಳಸಲಾಗಿತ್ತು.ಫ್ರಾನ್ಸ್‌ನಲ್ಲಿ ಸ್ಯಾಂ–ಸೀಮೋಂನ ಅನುಯಾಯಿಗಳು ಪ್ರಕಟಿಸುತ್ತಿದ್ದ 'ಲಾ ಗ್ಲೋಬ್' ಎಂಬ ಪತ್ರಕೆಯಲ್ಲಿ ಇವರ ಸಿದ್ಧಾಂತಗಳನ್ನು ಸಮಾಜವಾದ ಎಂಬ ಹೆಸರಿನಲ್ಲಿ ಹೆಸರಿಸುತ್ತಾರೆ. ಜಗತ್ತಿನ ಶ್ರೇಷ್ಠ ಸಾಮಾಜಿಕ ಚಿಂತಕನಾದ ಕಾಲ್ ಮಾರ್ಕ್ಸ್ ಸಮಾಜವಾದ ಚಿಂತನೆಗೆ ಅಪಾರ ಕೊಡುಗೆ ನೀಡಿದವನು. ಕಾಲ್ ಮಾರ್ಕ್ಸ್ ಮತ್ತು ಫೆಡರಿಕ್ ಏಂಗೆಲ್ಸ್ ಅವರು ಸಮಾಜವಾದವನ್ನು ಮೊದಲ ಬಾರಿಗೆ ಪ್ರಸ್ತಾಪಿಸಿದವರಲ್ಲದಿದ್ದರು ವೈಜ್ಞಾನಿಕವಾಗಿ ಚಿಂತಿಸಿದವರಲ್ಲಿ ಇವರೇ ಪ್ರಮಥರು.

ಸಮಾಜವಾದ ಭಾರತಕ್ಕೆ ಹೊಸತಾದ ಪರಿಕಲ್ಪನೆಯಲ್ಲದಿದ್ದರು, ಅದರ ಸ್ವರೂಪ ಹೊಸ ಬಗೆಯದ್ದು. ವೇದ, ಉಪನಿಷತ್ತು, ಪ್ರಾಚೀನ ಸಾಹಿತ್ಯ, ಕನ್ನಡದ ವಚನ ಹಾಗೂ ಕೀರ್ತನಾ ಸಾಹಿತ್ಯವು ಸಮಾನತೆಯ ಭಾವವನ್ನು ಉದ್ಘರಿಸುತ್ತಲೇ ಬಂದಿವೆ. ವೇದಗಳಲ್ಲಿನ 'ಓಂ ಸಹನಾವತು ಸಹನೌಭುನತ್ತು', 'ಸರ್ವೇಭವಂತು ಸುಖಿನಃ', 'ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಉದ್ಗಾರಗಳಲ್ಲಿ ಸಮಾನತೆ ಆಶಯಗಳಿವೆ. ಕನ್ನಡ ಸಾಹಿತ್ಯದಲ್ಲಿ ಸಮಾಜವಾದದ ಚಿಂತನೆಯ ಮೂಲವನ್ನು ಎತ್ತಿ ಹಿಡಿದ ವಚನ ಸಾಹಿತ್ಯವು ಅತಿದೊಡ್ಡ ಸಮಾನತೆಯ ಆಗರವಾಗಿದೆ. ಉದಾಹರಣೆಗೆ: 'ಲಿಂಗವ ಪೂಜಿಸಿ ಫಲವೇನಯ್ಯ? ಸಮರತಿ ಸಮಕಳೆ ಸಮಸುಖವ ಅರಿಯದನಕ್ಕ' ಮುಂತಾದ ವಚನಗಳಲ್ಲಿ ಸಮಾನತೆಯ ಭಾವವನ್ನು ಗುರುತಿಸಬಹುದು.

ಆಧುನಿಕ ಭಾರತದಲ್ಲಿ ಸಮಾಜವಾದವನ್ನು ಪ್ರಮುಖವಾಗಿ ಪ್ರಾಚುರ್ಯಕ್ಕೆ ತಂದ ಆಚಾರ್ಯ ನರೇಂದ್ರದೇವ, ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ, ಯುಸುಫ್ ಮೆಹರಾರಿ, ಫೀಟರ್ ಆಲ್ವರಿಸ್ ಮುಂತಾದವರ ಜೀವನ ಕ್ರಮ, ವಿಚಾರ ಧಾರೆ ಹಾಗು ಅವರುಗಳ ತತ್ವಾದರ್ಶಗಳಲ್ಲಿ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವ ಮನೋಭಾವಗಳು ವ್ಯಕ್ತವಾಗುತ್ತವೆ. ಇವರಲ್ಲಿ ಲೋಹಿಯಾ ಅವರು ಸಮಾಜವಾದದ ಆಂದೋಲನಕ್ಕೆ ನೀಡಿದ ಕೊಡುಗೆ ಅಭೂತಪೂರ್ವವಾದದ್ದು. ಭಾರತೀಯ ಮನಸ್ಸಿನ ಚಿಂತಕರಾದ ಇವರು ಒಬ್ಬ ದಾರ್ಶನಿಕನಾಗಿಯು ಭಾರತದ ಪ್ರಗತಿಯ ಬಗ್ಗೆ ಚಿಂತಿಸಬಲ್ಲ ಅಪ್ಪಟ ಸಮಾಜವಾದಿಯಾಗಿದ್ದರು.

ಆಧುನಿಕ ಕನ್ನಡ ಸಾಹಿತ್ಯದ ಕಾಲ ಘಟ್ಟದಲ್ಲಿಯೂ ಸಮಾಜಮುಖಿ ನಿಹಿತದ ಸೃಜನಶೀಲ ಬರಹಗಾರರ ಒಂದು ಸಮೂಹವೇ ಇದೆ. ಕುವೆಂಪು, ಶಿವರಾಮ ಕಾರಂತ, ಬೇಂದ್ರೆ, ಮಾಸ್ತಿಯವರಂತಹ ಹಿರಿಯ ತಲೆ ಮಾರಿನ ಲೇಖಕರು ಸಮಾಜವಾದಿ ಸಾಹಿತ್ಯಕ್ಕೆ ತುಂಬಲಾರದ ಕೊಡುಗೆ ನೀಡಿದ್ದಾರೆ. ಪ್ರಗತಿಶೀಲ, ನವ್ಯ, ಕಾಲ ಘಟ್ಟದಲ್ಲಿಯೂ ಲಂಕೇಶ್, ತೇಜಸ್ವಿ, ದೇವನೂರು ಮಹಾದೇವ ಈ ನಿಟ್ಟಿನಲ್ಲಿ ಸಾಹಿತ್ಯ ಸಾಧನೆಮಾಡಿದ್ದಾರೆ. ಇಡೀ ಕನ್ನಡ ಸಾಹಿತ್ಯಕ್ಕೆ ಬಹು ದೊಡ್ಡ ತಿರುವನ್ನೆ ನೀಡಿದ ಬಿ.ಬಸವಲಿಂಗಪ್ಪ ಅವರ ಬೂಸಾ ಪ್ರಕರಣವನ್ನು ಸಮಾಜವಾದಿ ಸಾಹಿತ್ಯ ಚಳವಳಿಯ ಹಿನ್ನೆಲೆಯಲ್ಲಿ ಗುರುತಿಸಬಹುದು.

ಭಾರತೀಯ ಪ್ರಾಚೀನ ಹಾಗೂ ಪಾಶ್ಚಿಮಾತ್ಯ ಸಾಹಿತ್ಯದ ನೇರ ಪ್ರಭಾವ ಮತ್ತು ಪ್ರೇರಣೆಗೆ ಒಳಗಾದ ಕವಿ ಕುವೆಂಪು ಅವರು ತಮ್ಮ ಸಾಹಿತ್ಯ ಯಾನವನ್ನು ಇಂಗ್ಲಿಷ್ ಕವಿತೆಗಳನ್ನು ಬರೆಯುವ ಮೂಲಕವೆ ಆರಂಭಿಸುತ್ತಾರೆ. ಆಧುನಿಕ ಇಂಗ್ಲಿಷ್ ಶಿಕ್ಷಣ ಕುವೆಂಪು ಅವರ ಮೇಲೆ ಬೀರಿದ ಪ್ರಭಾವದ ದ್ಯೋತಕವಾಗಿ ಇದನ್ನು ಕಾಣಬಹುದು. ವರಕವಿ ಬೇಂದ್ರೆಯವರಿಂದ ಯುಗದ ಕವಿ, ಜಗದ ಕವಿ ಎಂದು ಹೊಗಳಿಸಿಕೊಂಡ ಕುವೆಂಪು, ತಮ್ಮ ಸಾಹಿತ್ಯದ ಮೂಲಕ ಲೌಕಿಕ ಮತ್ತು ಪಾರಮಾರ್ಥಿಕಗಳೆರಡನ್ನು ಸಾರ್ಥಕ ಮಾಡಿದವರು. ಆಧ್ಯಾತ್ಮಿಕತೆ, ವೈಚಾರಿಕತೆ, ನಿಸರ್ಗಪ್ರೇಮ, ರಾಷ್ಟ್ರೀಯತೆ, ಪ್ರಾದೇಶಿಕತೆ ಇವೆಲ್ಲವನ್ನು ಸಮನ್ವಯ ಸಮಷ್ಟಿ ಚೈತನ್ಯದಿಂದ ಕಂಡವರು. ಜನತಾ ಪ್ರಜ್ಞೆ, ಸಾಮಾಜಿಕ ಬದ್ಧತೆಗಳನ್ನು ಔಚಿತ್ಯಪೂರ್ಣವಾಗಿ ಸಂಗಮಗೊಳಿಸಬಲ್ಲ ದೈತ್ಯ ಪ್ರತಿಭೆ ಕುವೆಂಪು ಅವರಿಗೆ ಒಲಿದಿತ್ತು ಎಂದರೆ ತಪ್ಪಾಗುವುದಿಲ್ಲ. ಜನಜೀವನದಲ್ಲಿ ಆಳವಾಗಿ ಬೇರೂರಿರುವ ಮೂಢನಂಬಿಕೆ, ಪ್ರತಿಗಾಮಿತನ, ಜಡ ಸಂಪ್ರದಾಯಗಳು ಮರೆಯಾಗಿ ಜನರು ವೈಚಾರಿಕತೆಯನ್ನು ತಮ್ಮ ನಿತ್ಯ ಜೀವನದ ಭಾಗವಾಗಿಸಿಕೊಳ್ಳಬೇಕೆಂಬ ಸದಾಶಯ ಅವರ ಬರಹಗಳಲ್ಲಿ ಅಡಕವಾಗಿರುವುದನ್ನು ಗಮನಿಸಬಹುದು. ಸ್ವಾತಂತ್ರ್ಯ ಸಂಗ್ರಾಮ, ಭಾಷಾವಾರು ರಾಜ್ಯಕ್ಕಾಗಿ ಹೋರಾಟಗಳು ನಡೆಯುತ್ತಿದ್ದ ಕಾಲದಲ್ಲಿ ಜೀವಿಸಿದ್ದ ಕುವೆಂಪು ಪ್ರಕೃತಿ ಉಪಾಸಕರಾಗಿ, ಅಧ್ಯಾತ್ಮ ಸಾಧಕರಾಗಿ ತಮ್ಮದೇ ವಿಶಿಷ್ಟ ದಾರಿಯಲ್ಲಿ ಸಾಹಿತ್ಯದ

ಮೂಲಕವೇ ಹೋರಾಟವನ್ನು ರೂಪಿಸಿದರು. ಆ ಮೂಲಕ ಸಾಮಾಜಿಕ ಅನ್ಯಾಯಗಳಿಗೆ, ಅಸಮಾನತೆಗಳಿಗೆ ಪ್ರತಿಕ್ರಿಯೆ ತೋರಿದವರು. ಶ್ರೀಮಂತ ಕಲ್ಪನಾ ಪ್ರತಿಭೆಯ ಮೂಲಕ ಸಮಾಜದಲ್ಲಿ ಯಾರು ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ ಎಂಬ ಸಮತಾವಾದವನ್ನು ಪ್ರತಿಪಾದಿಸಿದ ಕುವೆಂಪು, ನಮ್ಮ ನಡುವಿನ ಬಹುದೊಡ್ಡ ಸಮಾಜವಾದಿ ಚಿಂತಕರಾಗಿ ಕಾಣಿಸಿಕೊಳ್ಳುತ್ತಾರೆ. 'ಶ್ರೀರಾಮಾಯಣ ದರ್ಶನಂ' ಎಂಬ ಮಹಾಕಾವ್ಯ ರಚಿಸಿ ರಾಮಾಯಣದಲ್ಲಿ ಅವಜ್ಞೆಗೊಳಗಾಗಿದ್ದ ಪಾತ್ರಗಳನ್ನು ಉನ್ನತೀಕರಿಸುವ ಕುವೆಂಪು; ತಿಮ್ಮಿ, ನಾಯಿಗುತ್ತಿ, ಪಿಂಚಲು, ಐತ, ಜಲಗಾರ, ಸುಬ್ಬಮ್ಮನಂತಹ ಪಾತ್ರಗಳ ಮೂಲಕ ಸಂಕೀರ್ಣ ಪ್ರಪಂಚವೊಂದರ ದರ್ಶನ ಮಾಡಿಸಿದರೆಂಬುದು ಮಹತ್ವದ ವಿಷಯ. ಪುರಾಣ ಪ್ರಪಂಚದಲ್ಲಿ ಕಳೆದುಹೋಗದೆ ವಾಸ್ತವ ಜಗತ್ತಿನ ರೂಕ್ಷತೆಗಳನ್ನು, ರೌರವಗಳನ್ನು ಈ ಮೇಲಿನ ಪಾತ್ರಗಳ ಮೂಲಕವೇ ಕಂಡರಿಸಿದುದು ಅವರ ಸಮತಾ ದೃಷ್ಟಿಕೋನದ ಭಾಗವಾಗಿದೆ.

ಸಮಾಜ ಜೀವಿಯಾದ ಮನುಷ್ಯರು ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸಲು 'ಧರ್ಮ' ಎಂಬ ಸಂಕೀರ್ಣ ಸಂಸ್ಥೆಯೊಂದನ್ನು ಸ್ಥಾಪಿಸಿ, ಮೌಲ್ಯ ಮತ್ತು ಆದರ್ಶಗಳನ್ನು ಆ ಧರ್ಮದೊಳಗೆ ನಿಹಿತಗೊಳಿಸಿದರು. ಅಂದರೆ, ಲೌಕಿಕ ಜೀವನವನ್ನು ಉನ್ನತೀಕರಿಸಿಕೊಂಡು ಯಾರಿಗೂ ಕೇಡಿಲ್ಲವಾಗಿ ಬದುಕುವ ಸನ್ಮಾರ್ಗವಾಗಿ ಧರ್ಮಗಳು ಹುಟ್ಟಿಕೊಂಡಿರಬಹುದು. ಆದರೆ, ಕಾಲಕ್ರಮೇಣ ಈ ತತ್ತ್ವ ಮತ್ತು ಮೌಲ್ಯಾದರ್ಶಗಳು ಹೆಚ್ಚು ಸಂಕುಚಿತವಾಗುತ್ತ, ಢಾಳಾಗುತ್ತಾ ಮನುಷ್ಯರ ಬದುಕನ್ನು ಇನ್ನಷ್ಟು ಜಟಿಲಗೊಳಿಸಿವೆ. ಧರ್ಮದ ಸಂಕುಚಿತ ಜಡ ಸಂಪ್ರದಾಯಗಳೇ ರಕ್ಷಾಭೇರಿಗಳಂತೆ ಆರ್ಭಟಿಸಿ ಧರ್ಮದ ಮೂಲ ಆಧ್ಯಾತ್ಮಿಕ ಉದ್ದೇಶವನ್ನು ಮಸಕುಗೊಳಿಸಿ ಧರ್ಮಗಳು ಮತಗಳಾಗಿ ಅಷ್ಟೇ ಉಳಿದುಕೊಂಡಿವೆ. ಅಂಧಶ್ರದ್ಧೆಗಳಿಂದ ತುಂಬಿ–ತುಳುಕುತ್ತಿರುವ ಮತ, ಧರ್ಮಗಳು ಅರ್ಥಹೀನ ಆಚರಣೆಗಳ ಮೂಲಕ ಸಮಾಜದ ಸಹಬಾಳ್ವೆ ಮತ್ತು ಸ್ವಾಸ್ಥ್ಯವನ್ನು ವಿರೂಪಗೊಳಿಸಿವೆ. ಸಮುದಾಯಗಳ ನಡುವೆ ಶಾಂತಿ ಕದಡುವುದಲ್ಲದೆ ಇವುಗಳ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಮತ–ಧರ್ಮಗಳು ಕಾರ್ಯ ಪ್ರವೃತ್ತವಾಗಿರುವುದು ಶೋಚನೀಯ. ಮತ–ಧರ್ಮಗಳು ಮನುಷ್ಯರನ್ನು ಬಲಿಪಶುಗಳನ್ನಾಗಿಸಿ ಅವರ ನಡುವೆ ಮೇಲು–ಕೀಳು, ಬಡವ–ಬಲ್ಲಿದ ಇತ್ಯಾದಿ ಅಸಮಾನತೆಗಳಿಗೆ ಕಾರಣವಾಗಿವೆ. ಆದ್ದರಿಂದ ಇಂತಹ ಸಂದಿಗ್ಧವನ್ನು ನಿವಾರಿಸಿಕೊಳ್ಳಲು ಕುವೆಂಪು ತೋರುವ ದಾರಿ ಮಹತ್ವದ್ದಾಗಿ ತೋರುತ್ತದೆ. ಅಧ್ಯಾತ್ಮ, ವಿಜ್ಞಾನ, ವೈಚಾರಿಕತೆಗಳಿಂದ ತಮ್ಮ ಆಲೋಚನೆಯನ್ನು, ವ್ಯಕ್ತಿತ್ವವನ್ನು ರೂಪಿಸಿಕೊಂಡ ಕುವೆಂಪು ಮತಭ್ರಾಂತಿಯ ಮತೀಯತೆಯನ್ನು ಸಾಹಿತ್ಯದ ಮೂಲಕವೇ ನಿವಾರಿಸಿಕೊಳ್ಳಲು ಯತ್ನಿಸಿದ್ದಾರೆ.

"ಮತ ನಿಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ, ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿ ಸಾಮಾಜಿಕ ಕಟ್ಟು–ಕಟ್ಟಳೆಗಳ ಕಂಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು, ಒಬ್ಬರೊಡನೊಬ್ಬರು ಕುಳಿತು

ಭೋಜನ ಮಾಡದಿರುವುದು, ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರು ಸಾರ್ವಜನಿಕವಾದ ಬಾವಿ–ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು, ಕೆಲವರನ್ನು ದೇವಸ್ಥಾನದೊಳಗೆ ಸೇರಿಸದಿರುವುದು, ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು, ಹಾಗೆ ಬರಗೊಡಿಸಬೇಕೆ ಬೇಡವೇ ಎಂದು ಚರ್ಚೆ ನಡೆಸುವುದು ಇತ್ಯಾದಿ ಕೆಲಸಕ್ಕೂ ಬಾರದ ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಠಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ."[1] ಹೀಗೆ ಮತ–ಧರ್ಮಗಳು ಅಧ್ಯಾತ್ಮ ಸಾಧನೆಗಿಂತ, ಪಾಪಕರ್ಮಗಳೆಂಬ ಭ್ರಾಂತಿಯ ಸುತ್ತಾ ಗಿರಕಿ ಹೊಡೆಯುತ್ತಾ ಮತೀಯ ಕಂದಾಚಾರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿವೆ ಎಂಬುದನ್ನು ಕುವೆಂಪು ಗುರುತಿಸಿದ್ದಾರೆ. ಅವರು ಧರ್ಮವೂ ಕೂಡ ಹೇಗೆ ವೈಚಾರಿಕ ಪ್ರಜ್ಞೆಯನ್ನು ಅಳವಡಿಸಿಕೊಳ್ಳಬೇಕು ಎಂದು ವಿವರಿಸಿದರಲ್ಲದೆ, ತಮ್ಮ ವೈಯಕ್ತಿಕ ಜೀವನದಲ್ಲೂ ಸಾಧಿಸಿ ತೋರಿಸಿದರು. "ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ"[2] ಎಂದು ಸಾರುವ ಮೂಲಕ ಮನುಜಮತ ವಿಶ್ವಪಥದತ್ತ ಸಾಗಬೇಕೆಂದು ಆಶಿಸುತ್ತಾರೆ.

ಸಕಲ ಸರ್ವ ಜೀವಿಗಳನ್ನು ಸಮಾನವಾಗಿ ಕಾಣುವ, ಸರ್ವರ ಉದಯವನ್ನು ಬಯಸುವ ಮನುಜಮತ ವಿಶ್ವಪಥವು ಯಾವುದೇ ರೀತಿಯ ಕಟ್ಟಳೆಗಳಿಗೆ ಒಳಗಾಗದೆ ಅನಂತವಾಗಿರಬೇಕೆಂಬುದನ್ನು ಕುವೆಂಪು ತಮ್ಮ ಕಾವ್ಯವೊಂದರಲ್ಲಿ ಈ ರೀತಿ ಅಭಿವ್ಯಕ್ತಿಸಿದ್ದಾರೆ.

**'ನೂರು ಮತದ ಹೊಟ್ಟ ತೂರಿ**

**ಎಲ್ಲ ತತ್ತ್ವದೆಲ್ಲೆ ಮೀರಿ**

**ನಿರ್ದಿಗಂತವಾಗಿ ಏರಿ'[3]**

ಸರ್ವೋದಯ, ಸಮನ್ವಯ, ಸಮಾನತೆಯ ಪೂರ್ಣದೃಷ್ಟಿ, ವೈಜ್ಞಾನಿಕ ಮನೋಭಾವ, ಆಧ್ಯಾತ್ಮಿಕ ಚಿಂತನೆ ಇವೇ ಮೊದಲಾದವು ಮನುಷ್ಯರ ಮತಧರ್ಮ ಆಗಿರಬೇಕೆಂಬುದು ಕುವೆಂಪು ಅವರ ಆಶಯ.

ಶ್ರೀ ಸಾಮಾನ್ಯ ಭಗವಂತನ ಸ್ವರೂಪ ಎಂದ ಕುವೆಂಪು ತಮ್ಮ ಸಾಹಿತ್ಯವನ್ನು ಸಾಮಾನ್ಯನ ನೆಲೆಗೆ ಕೊಂಡೊಯ್ದರಲ್ಲದೆ, ಸಾಮಾನ್ಯನನ್ನು ಶ್ರೀ ಸಾಮಾನ್ಯನ ಸ್ಥಾನಕ್ಕೇರಿಸಿದರು. ಆ ಮೂಲಕ ಸಾಮಾನ್ಯನಿಗೆ ವಿಶೇಷ ಅರ್ಥ ಮತ್ತು ಘನತೆಯನ್ನು ಒದಗಿಸಿದರು. ಕುವೆಂಪು ಅವರ ಪ್ರಕಾರ ಸಾಮಾನ್ಯನೆಂಬ ಗ್ರಹಿಕೆಯನ್ನು ಮರುವ್ಯಾಖ್ಯಾನಿಸುವುದು ಎಂದರೆ ವಿಶೇಷ ಪದವನ್ನೋ ಅಥವಾ ಅಲಂಕಾರವನ್ನೋ ಬಳಸಿಕೊಂಡು ವರ್ಣಿಸುವುದಲ್ಲ. ಜನರ ಅನುದಿನದ ಬದುಕಿನ ಮೂಲಕ, ಅವರ ವೃತ್ತಿ–ಪ್ರವೃತ್ತಿಗಳನ್ನು ಗೌರವದಿಂದ ಕಾಣುವುದು ಕೂಡ ಸಾಮಾನ್ಯನಿಗೆ ಘನತೆಯನ್ನು ಒದಗಿಸುವ ಪ್ರಕ್ರಿಯೆ. ಹಾಗಾಗಿಯೇ ಕುವೆಂಪು ಅವರಿಗೆ ಜಲಗಾರನೊಬ್ಬನಲ್ಲಿ ಶಿವನನ್ನು ಕಾಣಲು, ರೈತನೊಬ್ಬನಲ್ಲಿ ಯೋಗಿಯನ್ನು ಕಾಣಲು ಸಾಧ್ಯವಾಯ್ತು. ರೈತ ಬಳಸುವ 'ಗೊಬ್ಬರ'ವೂ ಕಾವ್ಯವಸ್ತುವಾದದ್ದು ಈ ಹಿನ್ನೆಲೆಯಲ್ಲಿಯೇ ಅನ್ನಿಸುತ್ತದೆ.

ಈ ಬಗೆಯ ಘನತೆಯನ್ನು ಕುವೆಂಪು ಕೇವಲ ಮನುಷ್ಯ ಲೋಕಕ್ಕಷ್ಟೇ ಸೀಮಿತಗೊಳಿಸದೆ, ಭೂಮಿಯ ಮೇಲೆ ವಾಸಿಸುವ ಅನೇಕಾನೇಕ ಪ್ರಾಣಿ–ಪಕ್ಷಿಗಳಿಗು, ಹೂ–ಗಿಡ–ಬಳ್ಳಿಗಳಿಗು ವಿಸ್ತರಿಸಿದ್ದಾರೆ. ಇದಕ್ಕೊಂದು ಉತ್ತಮ ನಿದರ್ಶನವಾಗಿ ಕುವೆಂಪು ಅವರ ಕಾದಂಬರಿಗಳನ್ನೇ ಗಮನಿಸಬಹುದು. ಮಂಜಭಟ್ಟರಲ್ಲಿ ಕಾಣುವ ಜಾತಿಶ್ರೇಷ್ಠತೆಯ ದರ್ಪ, ಚಂದ್ರೇಗೌಡರ ಸಂಪತ್ತಿನ ಅಬ್ಬರ, ಹೆಗ್ಗಡತಿಯಾದರು ಸುಬ್ಬಮ್ಮನಲ್ಲಿ ಮತ್ತೆ ಮತ್ತೆ ಸುಳಿವ ಅಸಹಾಯಕತೆಯ ವಿವರಣೆಗಳು ಒಂದೆಡೆಯಾದರೆ ಗುತ್ತಿ–ತಿಮ್ಮಿ, ಐತ–ಪಿಂಚಲು ಇವರ ಬದುಕಿನ ಪ್ರೀತಿಯ ಪರಿಯನ್ನು ಇನ್ನೊಂದು ಕಡೆ ವರ್ಣಿಸಿದ್ದಾರೆ. ಇವುಗಳಿಗಿಂತ ಭಿನ್ನವಾದ ಕಾನನ, ಅಲ್ಲಿ ವಾಸಿಸುವ ತರಾವರಿ ಹುಳು–ಹುಪ್ಪಟೆಗಳ ಪ್ರಪಂಚವನ್ನು, ಮನುಷ್ಯಲೋಕವನ್ನು ವರ್ಣಿಸುವಷ್ಟೇ ಆಸ್ಥೆಯಿಂದ ವಿವರ–ವಿವರವಾಗಿ ಬಣ್ಣಿಸಿದ್ದಾರೆ. ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ ಎಂಬುದು ಇಲ್ಲೆಲ್ಲ ಮತ್ತೆ ಮತ್ತೆ ನೆನಪಾದರೆ ಆಶ್ಚರ್ಯವೇನಿಲ್ಲ.

ಕುವೆಂಪು ಜೀವಿಸಿದ್ದ ಕಾಲ ಅನೇಕ ಕ್ರಾಂತಿಗಳ ಪ್ರವರ್ಧನ ಸಮಯ. ದೇಶ ಸ್ವತಂತ್ರಗೊಳ್ಳಬೇಕು ಎಂಬ ಕೂಗು ಒಂದೆಡೆಯಾದರೆ, ದೇಶದ ಒಳಗೆ ಶತಮಾನಗಳಿಂದ ಶೋಷಣೆಗೆ ಒಳಗಾಗಿರುವ ಅನೇಕ ಸಮುದಾಯಗಳು ಪಟ್ಟಭದ್ರ ಹಿತಾಸಕ್ತಿಗಳಿಂದ ಸ್ವತಂತ್ರಗೊಳ್ಳಬೇಕು ಎಂಬ ಕೂಗು ಮತ್ತೊಂದು ಕಡೆ. ಇಂತಹ ಸಾಮಾಜಿಕ ಪಲ್ಲಟಗಳಿಗೆ ಪ್ರತ್ಯಕ್ಷದರ್ಶಿಯಂತಿರುವ ಸೃಜನಶೀಲ ಬರಹಗಾರನೊಬ್ಬ ಪ್ರತಿಕ್ರಿಯಿಸದೆ ಇರಲು ಹೇಗೆ ತಾನೇ ಸಾಧ್ಯವಾದೀತು? ಈ ಪರಿಪ್ರೇಕ್ಷದಲ್ಲಿ ಕುವೆಂಪು ತನ್ನ ಕಾಲದ ತಲ್ಲಣಗಳಿಗೆ ತಮ್ಮ ಸಾಹಿತ್ಯದ ಮುಖೇನ ಅನ್ಯಾನ್ಯ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಸಮಾಜದಲ್ಲಿ ಆಳವಾಗಿ ಮಡುಗಟ್ಟಿದ ಬಡವ–ಶ್ರೀಮಂತನೆಂಬ ಆರ್ಥಿಕ ಅಸಮಾನತೆಯನ್ನು ಹಾಗೂ ಉತ್ತಮ–ಅಧಮನೆಂಬ ಸಾಮಾಜಿಕ ಅಸಮಾನತೆಗಳನ್ನು ತೀಕ್ಷ್ಣವಾಗಿ ವಿರೋಧಿಸಿದ್ದಾರೆ.

**'ಹೊಟ್ಟೆಯ ಪಾಡಿಗೆ ಕಾವಿಯನುಟ್ಟು**
**ಬಡವರ ಹಸಿವೆಗೆ ಮೌಢ್ಯವ ತೊಟ್ಟು**
**ಸುಖಸಂಪತ್ತನು ಕೊಂಡವರು**
**ಮೃಷ್ಟಾನ್ನವನ್ನೇ ಉಂಡವರು**
**ಗುರುಗಳು ಶಿಷ್ಯರು ಮನೆಗಳು ಮಠಗಳು**
**ಎಲ್ಲರು ಬೆಂದರು ಬಡಬಾಗ್ನಿಯಲಿ**
**ಬಡವರ ಬಗ್ಗರ ಜಠರಾಗ್ನಿಯಲಿ!**
**ಬಡವನ ಜಠರಾಗ್ನಿಯೆ ಬಡಬಾಗ್ನಿ**
**ಬಡವನೆ ಕಲಿಯುಗದಂತ್ಯದ ಕಲ್ಕಿ!'**[4]

ಹೀಗೆ ಸಾಮಾಜಿಕ ಹಾಗು ಆರ್ಥಿಕ ಅಸಮಾನತೆಗೆ ಪ್ರತಿಕ್ರಿಯಿಸಿದ ಕುವೆಂಪು, ಕನ್ನಡ ನಾಡು–ನುಡಿಗೆ ಪ್ರತಿಕ್ರಿಯಿಸುವ ಬಗೆಯು ಅಪೂರ್ವವಾದದ್ದು. ಅವರ ಸಮಕಾಲೀನ ಇತರ ಸಾಹಿತಿಗಳಿಗೆ ಹೋಲಿಸಿಕೊಂಡರೆ ಕುವೆಂಪು ಅವರ ಕನ್ನಡ ಪ್ರೇಮ ವಿಶೇಷ ಸ್ವರೂಪದ್ದು ಎನಿಸುತ್ತದೆ. ಅಂದರೆ, ಕನ್ನಡವನ್ನು ಕೇವಲ ಒಂದು ಭಾಷೆಯಾಗಿ ಅಷ್ಟೇ ಕಾಣದೆ ಜನಮನವನ್ನು ಬೆಸೆಯುವ ಸಾಂಸ್ಕೃತಿಕ ವಾಹಕವಾಗಿ ಕಂಡರು. ಇವರ ಭಾಷಾ ಬಳಕೆ ಕೇವಲ ಕನ್ನಡದಲ್ಲಿ ಮಾತ್ರ ಅನುರಣಿಸದೆ, ಅನ್ಯವೆಂದು ಪರಿಗಣಿಸಲ್ಪಟ್ಟದ್ದನ್ನು ಒಳಗೊಳ್ಳುವ ನೀತಿಯನ್ನು ಅನುಸರಿಸಿತ್ತು ಎಂದರೆ ತಪ್ಪಲ್ಲ. ಬ್ರಾಹ್ಮಣ್ಯವನ್ನು ತೀವ್ರವಾಗಿ ಪ್ರತಿರೋಧಿಸುವ ಕುವೆಂಪು, ಸಂಸ್ಕೃತವನ್ನು ಉತ್ಕೃಷ್ಟವಾಗಿ ಬಳಸಿಕೊಂಡದ್ದು ಏಕೆ? ಎಂಬ ಪ್ರಶ್ನೆ ಸಹಜವಾದದ್ದು. ಶೂದ್ರ ಕವಿಯೊಬ್ಬ ಮೇಲ್ಜಾತಿಯ ಕವಿಗಳಷ್ಟೇ ಸಶಕ್ತವಾದ ಭಾಷೆಯನ್ನು ತನ್ನ ಸಾಹಿತ್ಯದಲ್ಲಿ ದುಡಿಸಿಕೊಳ್ಳಬಲ್ಲ ಎಂಬುದನ್ನು ಪ್ರತಿಪಾದಿಸಲು ಕುವೆಂಪು ಈ ಬಗೆಯ ಭಾಷಾ ನೀತಿಯನ್ನು ಅನುಸರಿಸಿದರು ಎಂಬುದು ಸಾಮಾನ್ಯ ಗ್ರಹಿಕೆ. ಆದರೆ, ಇದಕ್ಕೂ ಭಿನ್ನವಾಗಿ ಕುವೆಂಪು ಬಹು ಭಾಷಾ ನೀತಿಯನ್ನು ಅನುಸರಿಸುವ ಮೂಲಕ ಕನ್ನಡವನ್ನು ಮತ್ತಷ್ಟು ಪ್ರಾಜ್ವಲಿಸುವಂತೆ ಮಾಡಿದರು. ಕನ್ನಡದ ಜೊತೆಗೆ ಸಾವಯವ ಸಂಬಂಧ ಹೊಂದಿರುವ ಸಂಸ್ಕೃತವನ್ನಾಗಲಿ ಅಥವಾ ಮತ್ಯಾವುದೆ ಭಾಷೆಯನ್ನಾಗಲಿ ಅವರು ಅವುಗಳನ್ನು 'ಅನ್ಯ'ವೆಂದು ಭಾವಿಸದೆ 'ಸಹ'ವರ್ತಿಗಳಾಗಿ ಕಂಡರು. ಅನ್ಯವೆಂದು ಕಲ್ಪಿಸಿಕೊಂಡಾಗ ಉಂಟಾಗುವ ಭಾವತೀವ್ರತೆಗಿಂತ, 'ಸಹ' ಎಂದು ಭಾವಿಸಿದಾಗ ಅದರ ಅನುಭವವೇ ಸಂಪೂರ್ಣ ವ್ಯತಿರಿಕ್ತವಾದದ್ದಾಗಿರುತ್ತದೆ. ಸಂಸ್ಕೃತ ಮತ್ತು ಕನ್ನಡವನ್ನು ಬೆರೆಸುವ ಕುವೆಂಪು ಅವರ ಈ ವಿಧಾನವು ಅವರಿಗಿದ್ದ ಭಾಷಾ ನೀತಿಯ ಪ್ರತಿಫಲನ. 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ', ಎಂದು ಸಾರಿದ ಕುವೆಂಪು ಅವರಿಗೆ ಕನ್ನಡ ಎನ್ನುವುದು ತಮ್ಮ ಬದುಕಿನ ಮುಕ್ತಿ ಸಾಧನವಾಗಿದೆ.

ಕುವೆಂಪು ಕನ್ನಡ ನಾಡನ್ನು ಕೇವಲ ಭೌತಿಕ, ಭೌಗೋಳಿಕ ಪ್ರದೇಶವಾಗಿ ಅಷ್ಟೇ ಕಾಣಬಯಸುವುದಿಲ್ಲ. ಕನ್ನಡ ಭೌಗೋಳಿಕವಾಗಿ ಅಷ್ಟೇ ಉಳಿದುಕೊಳ್ಳದೆ, ಸಾಂಸ್ಕೃತಿಕವಾಗಿಯು ವಿಸ್ತರಿಸಬೇಕೆಂಬುದು ಕುವೆಂಪು ಅವರ ಆಶಯ. ಈ ಆಶಯವು ಅವರ ಅನೇಕ ಕವಿತೆಗಳಲ್ಲಿ ಮತ್ತೆ ಮತ್ತೆ ಪ್ರಕಟಗೊಳ್ಳುತ್ತದೆ.

**'ಬರಿಯ ಚದರ ಮೈಲಿಗಳಲ್ಲಿ, ಕರ್ಣಾಟಕ ದೇಶ ವಿಸ್ತೀರ್ಣಮಂ**
**ನೆನೆನೆನೆ ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ**
**ಮರೆಯದಿರು ಚದರ ಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ**
**ಪ್ರಾಣಮಯ ಭಾವಮಯ ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ**[5]

ಕುವೆಂಪು ಅವರು ಕನ್ನಡವನ್ನು ಒಂದು ಜನ ಸಮುದಾಯದ ಸಂಸ್ಕೃತಿಯ ಭಾಗವಾಗಿ ಕಂಡಿದ್ದರ ಪ್ರತಿಫಲವಾಗಿ ಅವರಿಗೆ ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಶೋಧಿಸಲು ಸಾಧ್ಯವಾಗಿದೆ. ಕನ್ನಡ ನಾಡು–ನುಡಿಯ ಅನನ್ಯತೆಯನ್ನು ಕನ್ನಡಿಗನ ಅಂತರಂಗದಲ್ಲಿ ಅಂತರ್ಗತಗೊಳಿಸಲು ಕುವೆಂಪು ಅವಿರತವಾಗಿ ಶ್ರಮಿಸಿದ್ದಾರೆ. ಹೀಗೆ ಅಂತರ್ಗತಗೊಳಿಸುವ ಪ್ರಯತ್ನದಲ್ಲಿ ಸಮುದಾಯದ ಸಾಂಸ್ಕೃತಿಕ ಸಮಗ್ರತೆಯನ್ನು ಮರೆಯುವುದಿಲ್ಲ. ಅರ್ಥಾತ್, ಯಾವುದೇ ನಿರ್ದಿಷ್ಟ ಜಾತಿ ಅಥವಾ ಸಮುದಾಯವನ್ನು ಮಾತ್ರ ಆ ಭಾಷೆಯ ವಾರಸುದಾರರನ್ನಾಗಿಸಿ ಉಳಿದ ಜನ ಸಮುದಾಯದ ಮೇಲೆ ಕನ್ನಡತ್ವವನ್ನು ಹೇರುವ ಪ್ರಯತ್ನ ಮಡುವುದಿಲ್ಲ. ಬದಲಿಗೆ, ನಾಡು–ನುಡಿಯ ಪರಿಕಲ್ಪನೆಯನ್ನು ಸಾಂಸ್ಕೃತಿಕ ಸಮಗ್ರತೆಯನ್ನು ಸಾಧಿಸುವ ಸಾಧನವಾಗಿ ದುಡಿಸಿಕೊಳ್ಳುತ್ತಾರೆ. ಆದ್ದರಿಂದ ಕುವೆಂಪು ಸಮತಾವಾದದ ದ್ಯೋತಕವಾಗಿಯೇ ಉಜ್ವಲಿಸುತ್ತಾರೆ.

ತಮ್ಮ ಕಾದಂಬರಿಗಳ ಒಳಗೆ ಗೊಂಡಾರಣ್ಯವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಕುವೆಂಪು, ಅಷ್ಟೇ ಜಟಿಲವೂ ಸಂಕೀರ್ಣವೂ ಆದ ಮನುಷ್ಯ ಲೋಕವೆಂಬ ಗೊಂಡಾರಣ್ಯವನ್ನು ದರ್ಶಿಸುತ್ತಾರೆ. ಪಶ್ಚಿಮ ಘಟ್ಟದ ಕಾಡುಗಳು ಎಷ್ಟು ದಟ್ಟವೋ, ಅದರೊಳಗೆ ವಾಸಿಸುವ ಮನುಷ್ಯರ ಗುಣ–ಸ್ವಭಾವಗಳು ಅಷ್ಟೇ ದಟ್ಟವಾಗಿವೆ. ಇಂತಹ ದಟ್ಟಾರಣ್ಯದ ಅಂಚಿನಲ್ಲಿ ಕ್ರಮಿಸುವ ಯಾರಿಗೂ ಕಾಡಿನ ಸಾಂದ್ರತೆ ಸಂಪೂರ್ಣವಾಗಿ ಅರಿವಿಗೆ ಬರಲು ಸಾಧ್ಯವಿಲ್ಲ. ಹಾಗಾಗಿಯೇ, ಕುವೆಂಪು ಅವರ ಎರಡೂ ಕಾದಂಬರಿಗಳನ್ನು ಏಕ ದೃಷ್ಟಿಕೋನದಲ್ಲಿ ಅಧ್ಯಯನಕ್ಕೊಳಪಡಿಸುವುದು ಸಮಂಜಸವಲ್ಲ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅನ್ಯ ಮತೀಯರನ್ನು ಅನುಚಿತವಾಗಿ ಪ್ರತಿಬಿಂಬಿಸಲಾಗಿದೆ ಅಥವಾ ತಳ ಸಮುದಾಯಗಳನ್ನು ಸಮರ್ಪಕವಾಗಿ ಚಿತ್ರಿಸಲಾಗಿಲ್ಲ ಎಂಬ ಆರೋಪಗಳು ಕನ್ನಡ ವಿಮರ್ಶಾ ವಲಯದಲ್ಲಿ ಈಗಾಗಲೇ ಕೇಳಿ ಬಂದಿವೆ. ಆದರೆ, ಕುವೆಂಪು ಕಾದಂಬರಿಯ ಪಾತ್ರಗಳು ಜೀವಿಸಿದ್ದ ಕಾಲಮಾನದಲ್ಲಿ, ಮಲೆನಾಡಿನ ಜನರ ಸಾಮಾಜಿಕ ಬದುಕು ಹೇಗಿತ್ತೆಂಬುದನ್ನು ಗಮನಿಸಬೇಕಾಗುತ್ತದೆ. ವಿವಿಧ ಪ್ರಾದೇಶಿಕ ಹಿನ್ನೆಲೆಯಿಂದ ಬಂದ ಅಲ್ಪಸಂಖ್ಯಾತ ಸಮುದಾಯಗಳು, ಮಲೆನಾಡಿನ ಬದುಕಿನೊಂದಿಗೆ ತಮ್ಮ ಬದುಕು ಕಟ್ಟಿಕೊಳ್ಳುವ ಹಾದಿ ಸುಲಭದ್ದಾಗಿರಲಿಲ್ಲ. ಇದರಾಚೆಗೂ ಎಲ್ಲಾ ಜಾತಿ, ಧರ್ಮಗಳ ಜನರಿಗೂ, ಮನುಷ್ಯ ಸಹಜವಾದ ಕೆಲವು ವಿದ್ರೋಹಕ ಗುಣಗಳಿರುತ್ತವೆ ಎಂಬುದು ಅಷ್ಟೇ ಮುಖ್ಯ. ಹಾಗಾಗಿ ಕಾದಂಬರಿಯ ಪಾತ್ರಗಳನ್ನು ಜಾತಿ ಧರ್ಮಗಳ ಹಿನ್ನೆಲೆಯಲ್ಲಿ ಮಾತ್ರ ಗಮನಿಸದೆ ಆಯಾ ನಿರ್ದಿಷ್ಟ ವ್ಯಕ್ತಿಗಳಿಗೆ ಇರಬಹುದಾದ ವ್ಯಕ್ತಿ ವಿಶೇಷಗಳ ಹಿನ್ನೆಲೆಯಲ್ಲಿಯು ಅರ್ಥೈಸಬೇಕಾಗುತ್ತದೆ. ಒಟ್ಟಿನಲ್ಲಿ ಎಲ್ಲಾ ಜಾತಿ, ವರ್ಗ, ಧರ್ಮಗಳ ಜನರೂ ಸೇರಿ ತಮ್ಮ ವ್ಯವಸ್ಥೆಯನ್ನು ಎಷ್ಟು ಸಂಕೀರ್ಣಗೊಳಿಸಿದರು ಎಂಬುದು ಗಮನಾರ್ಹ.

ಕುವೆಂಪು ಅವರ ಕಾದಂಬರಿಗಳು ಅವು ರಚನೆಗೊಂಡ ಕಾಲಕ್ಕೆ ಕನ್ನಡ ಸಾಹಿತ್ಯ ವಲಯದಲ್ಲಿ ನಡೆದ ಬಹು ಮಹತ್ವದ ಪ್ರಯೋಗವಾಗಿತ್ತು. ಈ ರೀತಿಯ ಪ್ರಯೋಗ ಕುವೆಂಪು ಅವರು ಅದುವರೆಗೆ ರಚಿಸಿದ್ದ ಎಲ್ಲಾ ಸಾಹಿತ್ಯಕ್ಕೂ ಹೋಲಿಸಿದರೆ ವಿಶಿಷ್ಟವಾದದ್ದಾಗಿತ್ತು. ಕುವೆಂಪು ಒಂದೆಡೆ "ಹಳೆಯ ಆಭರಣಗಳನ್ನು ಕಾಲಕ್ಕೆ ತಕ್ಕಂತೆ ಹೊಸದಾಗಿ ಮಾರ್ಪಡಿಸಿಕೊಳ್ಳಬೇಕು" [6] ಎಂಬುದರ ಕುರಿತು ಮಾತನಾಡುತ್ತಾರೆ. ಈ ತತ್ತ್ವದಲ್ಲಿ ಅಪಾರ ನಂಬಿಕೆಯನ್ನು ಇಟ್ಟುಕೊಂಡಿದ್ದ ಕುವೆಂಪು ಅದನ್ನು ತಮ್ಮ ಸಾಹಿತ್ಯದಲ್ಲೂ ಸಾಬೀತು ಪಡಿಸಿದರು. ಪುರಾಣ ಹಾಗು ಇತಿಹಾಸಗಳಿಂದ ಸಾಹಿತ್ಯ ವಸ್ತುವನ್ನು ಆಯ್ದು ಅದನ್ನು ನಮ್ಮ ಕಾಲಕ್ಕೆ ತಕ್ಕಂತೆ ಒಗ್ಗಿಸಿಕೊಳ್ಳುವ ಅನೇಕ ಪ್ರಯತ್ನಗಳನ್ನು ಕುವೆಂಪು ತಮ್ಮ ಸಾಹಿತ್ಯ ಯಾನದುದ್ದಕ್ಕೂ ಮಾಡಿದ್ದಾರೆ. ರಾಮಾಯಣ ದರ್ಶನವೂ ಸೇರಿದಂತೆ ಬೆರಳ್ಗೆ–ಕೊರಳ್, ಶೂದ್ರ ತಪಸ್ವಿ, ರಕ್ತಾಕ್ಷಿ ಇತ್ಯಾದಿ ಕೃತಿಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಆದರೆ ಅವರ ಕಾದಂಬರಿಗಳು ಮಾತ್ರ ಇವುಗಳಿಗಿಂತ ಸಂಪೂರ್ಣ ವ್ಯತಿರಿಕ್ತವಾದ ದಾರಿ ಹಿಡಿದು, ಅದರಲ್ಲಿಯೇ ಯಶಸ್ಸು ಸಾಧಿಸಿದವು. ಇಲ್ಲಿ ಪುರಾಣೇತಿಹಾಸಗಳಿಗಿಂತ ನಮ್ಮನ್ನು ಇನ್ನಿಲ್ಲದಂತೆ ಕಾಡುತ್ತಿರುವ ವಾಸ್ತವದ ಹಸಿ–ಹಸಿ ವಿಷಯವಾದ 'ಆಧುನಿಕತೆ' ಹೆಚ್ಚು ಪ್ರಾಶಸ್ತ್ಯ ಪಡೆದುಕೊಂಡಿದೆ. ಬಂಡವಾಳಶಾಹಿಯು ನಮ್ಮ ಮನಪ್ರವೃತ್ತಿಯನ್ನೂ ಬಿಡದೆ ಪ್ರಭಾವಿಸುತ್ತಿರುವ ಸಂದಿಗ್ಧ ಕಾಲದಲ್ಲಿ ಆಧುನಿಕತೆಯು ಈ ನೆಲದಲ್ಲಿ ಪ್ರವೇಶ ಪಡೆದುಕೊಂಡಿದ್ದು ಹೇಗೆ ಎಂಬ ಪ್ರಶ್ನೆ ಕುವೆಂಪು ಅವರನ್ನು ಇನ್ನಿಲ್ಲದಂತೆ ಕಾಡಿರಲೇಬೇಕು. ಸಮಾಜವಾದಿ ಕಣ್ಣೋಟವಿದ್ದ ಕುವೆಂಪು ತಮ್ಮನ್ನು ಎಡೆಬಿಡದೆ ಕಾಡುತ್ತಿರುವ ಈ ಸಮಸ್ಯೆಯನ್ನು ಸೃಜನಶೀಲವಾಗಿಯೇ ನಿವಾರಿಸಿಕೊಳ್ಳುತ್ತಾರೆ. ಅದರ, ಆತ್ಯಂತಿಕ ಪ್ರತಿಫಲವೇ ಅವರ ಎರಡು ಬೃಹತ್ ಕಾದಂಬರಿಗಳಾಗಿವೆ.

ನವೋದಯ ಕಾಲಘಟ್ಟದಲ್ಲಿ ಬರೆಯುತ್ತಿದ್ದ ಅನೇಕ ಕಟ್ಟಾ ಸಂಪ್ರದಾಯವಾದಿ ಬ್ರಾಹ್ಮಣ ಬರಹಗಾರರ ನಡುವೆ, ಬ್ರಾಹ್ಮಣ್ಯದ ಹಿಡಿತದಿಂದ ತಪ್ಪಿಸಿಕೊಳ್ಳಬೇಕೆಂಬ ತುಡಿತವಿದ್ದ ಏಕೈಕ ಶೂದ್ರ ಧ್ವನಿಯಾಗಿ ಕುವೆಂಪು ಗೋಚರಿಸುತ್ತಾರೆ. ಹಿಂದೂ ಧರ್ಮದಲ್ಲಿದ್ದ ಅನೇಕ ಕಂದಾಚಾರಗಳನ್ನು, ಕಟ್ಟುಪಾಡುಗಳನ್ನು ನಿರಂಕುಶಮತಿಯಾಗಿ ಪ್ರತಿರೋಧಿಸುವ ಕುವೆಂಪು ತಮ್ಮ ಮೊದಲ ಕಾದಂಬರಿ 'ಕಾನೂರು ಹೆಗ್ಗಡತಿ'ಯಲ್ಲಿಯೇ ಪರ್ಯಾಯ ವ್ಯವಸ್ಥೆಯ ಕಡೆಗೆ ಬೆರಳು ಮಾಡಿ ತೋರುತ್ತಾರೆ. ಅಲ್ಲಿನ ಪ್ರಮುಖ ಪಾತ್ರದಾರಿ ಹೂವಯ್ಯ, ವ್ಯವಸ್ಥೆಯ ರೂಕ್ಷತೆಗೆ ಬೇಸತ್ತು ಕೊನೆಗೆ ಬುದ್ಧನ ಉಪಾಸಕನಾಗಿ ತನ್ನದೇ ದಾರಿಯನ್ನು ಕಂಡುಕೊಳ್ಳುತ್ತಾನೆ. ಕೌರ್ಯವೆ ಮನೆಮಾಡಿರುವ ವ್ಯವಸ್ಥೆಯನ್ನು ಬದಲಾಯಿಸಲು ನಡೆಸುವ ಸಕಲೆಂಟು ಪ್ರಯತ್ನಗಳು ವಿಫಲವಾದಾಗ, ಅಂತಹ ವ್ಯವಸ್ಥೆಯನ್ನು ಮುಲಾಜಿಲ್ಲದೆ ನಿರಾಕರಿಸುವುದು ಕೊನೆಯ ಮಾರ್ಗವಾಗಿ ಉಳಿಯುತ್ತದೆ ಎಂಬುದನ್ನು ಹೂವಯ್ಯನ ಪಾತ್ರ ಸಾರುತ್ತದೆ.

ಶೂದ್ರ ಲೇಖಕನೊಬ್ಬ ಎದುರಿಸಬಹುದಾದ ಸಾಮಾಜಿಕ ಇಕ್ಕಟ್ಟು–ಬಿಕ್ಕಟ್ಟುಗಳಿಗು, ಮೇಲ್ವರ್ಗದ ಲೇಖಕ ಎದುರಿಸುವ ಸಾಮಾಜಿಕ ಇಕ್ಕಟ್ಟು–ಬಿಕ್ಕಟ್ಟುಗಳಿಗು ಇರುವ ಅಂತರವನ್ನು ಕುವೆಂಪು ಅವರ ಕಾದಂಬರಿಗಳಲ್ಲಿ ಕಾಣಬಹುದು.

ಒಟ್ಟಿನಲ್ಲಿ ಕುವೆಂಪು ಅವರು ಕನ್ನಡದ ಆಧುನಿಕ ಕಾಲಘಟ್ಟದ ಮಹತ್ವದ ಬರಹಗಾರರು ಎಂಬುದು ನಿರ್ವಿವಾದ. ಕನ್ನಡ ವಿಮರ್ಶಾ ವಲಯದಲ್ಲಿ ಕುವೆಂಪು ಅವರ ವೈಚಾರಿಕತೆಯನ್ನು ಕುರಿತಂತೆ ಹೆಚ್ಚೆಚ್ಚು ಕಾಣ್ಕೆಗಳು ಪ್ರಕಟವಾಗಿವೆಯೇ ಹೊರತು ಆ ವೈಚಾರಿಕತೆಯ ಮೂಲವೇನು, ಕುವೆಂಪು ಅವರಿದ್ದ ಭೌತಿಕ ಪರಿಸರದಲ್ಲಿ ಆ ವೈಚಾರಿಕ ಪ್ರಜ್ಞೆ ಅವರಿಗೆ ಲಭಿಸಿದ್ದಾದರು ಹೇಗೆ ಇತ್ಯಾದಿ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ. ಪ್ರಸ್ತುತ ಲೇಖನದಲ್ಲಿ ಕುವೆಂಪು ಅವರ ಎಲ್ಲಾ ಪ್ರಮುಖ ಕಾಳಜಿಗಳು ಹೇಗೆ ಸಮಾಜವಾದಿ ನೆಲೆಯಿಂದ ಸೃಜಿಸಿ ಬಂದವು ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸುವ ಪ್ರಯತ್ನ ಮಾಡಲಾಗಿದೆ. ಇದು ಕುವೆಂಪು ಅವರ ಸಮಾಜವಾದದ ಒಂದು ಸಣ್ಣ ತುಣುಕು ಅಷ್ಟೇ. ಈ ನಿಟ್ಟಿನಲ್ಲಿ ಹೇಳುವುದಾದರೆ, ಕುವೆಂಪು ಅವರಿಗೆ ಬೌದ್ಧಿಕವಾಗಿ ಪ್ರಭಾವ ಬೀರಿದ ಅಂಶಗಳು ಏನೇನು ಎಂಬುದರ ಕುರಿತು ಶೋಧಿಸುವ ಕೆಲಸ ಕನ್ನಡದಲ್ಲಿ ಇನ್ನೂ ಬಾಕಿ ಉಳಿದಿದೆ ಎನಿಸುತ್ತದೆ. ಹಾಗಾಗಿ, ಸಮಾಜವಾದದ ಕಣ್ಣೋಟದಲ್ಲಿ ಕುವೆಂಪು ಅವರನ್ನು ಅಧ್ಯಯನಕ್ಕೊಳಪಡಿಸಬೇಕಾದ ತುರ್ತು ಇನ್ನೆಂದಿಗಿಂತಲೂ ಹೆಚ್ಚಾಗಿಯೇ ಇದೆ ಎಂಬುದು ಈ ಲೇಖನದ ಮುಖ್ಯ ಆಶಯ.

**ಅಡಿ ಟಿಪ್ಪಣಿಗಳು**

[1]. ಕುವೆಂಪು, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಉದಯರವಿ ಪ್ರಕಾಶನ ಮೈಸೂರು, 2014, ಪುಟ–

[2]. ಕುವೆಂಪು, 'ಓ ಬನ್ನಿ ಸ್ನೇಹಿತರೆ, ಬೇಗ ಬನ್ನಿ!' ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಉದಯರವಿ ಪ್ರಕಾಶನ ಮೈಸೂರು, 2012, ಪುಟ–28.

[3]. ಕುವೆಂಪು, ಅನಿಕೇತನ, ಅನಿಕೇತನ ಕವಿತೆ, ಉದಯರವಿ ಪ್ರಕಾಶನ ಮೈಸೂರು, 2013, ಪುಟ–55.

[4]. ಕುವೆಂಪು, ಕಲ್ಕಿ ಕವಿತೆ, ಪಾಂಚಜನ್ಯ, ಉದಯರವಿ ಪ್ರಕಾಶನ ಮೈಸೂರು, 2013, ಪುಟ–55.

[5]. ಕರ್ನಾಟಕ ರಾಜ್ಯೋದಯ ಶ್ರೀಗೀತೆ, ಕುವೆಂಪು ಸಮಗ್ರಕಾವ್ಯ ಸಂಪುಟ–2, ಉದಯರವಿ ಪ್ರಕಾಶನ ಮೈಸೂರು, ಪುಟ–146

[6]. ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಕುವೆಂಪು ಸಮಗ್ರ ಗದ್ಯ ಸಂಪುಟ–2, ಉದಯರವಿ ಪ್ರಕಾಶನ ಮೈಸೂರು.

**ಪರಾಮರ್ಶನ ಗ್ರಂಥಗಳು:**


1. ಮರಳಿ ಬರಲಿದೆ ಸಮಾಜವಾದ, ಡಿ ಎಸ್ ನಾಗಭೂಷಣ, ಲೋಹಿಯಾ ಪ್ರಕಾಶನ, ಬಳ್ಳಾರಿ, 2007.
2. ಹೊಸ ಹೆಜ್ಜೆ ಹೊಸ ಹಾದಿ, ಟಿ ಪಿ ಅಶೋಕ, ಅಕ್ಷರ ಪ್ರಕಾಶನ, 1981.
3. ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಕುವೆಂಪು ಸಮಗ್ರ ಗದ್ಯ, ಸಂಪುಟ–2.
4. ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ, ಸಂಕ್ರಮಣ ಪತ್ರಿಕೆ–60, ಸಂಕ್ರಮಣ ಪ್ರಕಾಶನ.
5. ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ ಮೈಸೂರು.
7. ಕುವೆಂಪು, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ ಮೈಸೂರು.